# ಗುಬ್ಬಿಯ ಸ್ವಾತಂತ್ರ್ಯೋತ್ಸವ



'ಒಂದು ಮೊಟ್ಟೆಯ ಕಥೆ'ಯಲ್ಲಿ ಕನ್ನಡ ಉಪನ್ಯಾಸಕನ ಪಾತ್ರದಲ್ಲಿ ನಗುವುಕ್ಕಿಸಿದ್ದ ರಾಜ್ ಬಿ ಶೆಟ್ಟಿ ಇದೀಗ ಮತ್ತೊಮ್ಮೆ ಅಂಥದ್ದೇ ಕಾಮಿಡಿ ಕಥೆಯೊಂದಿಗೆ ಬರುತ್ತಿದ್ದಾರೆ. ಈ ಸಲ ಅವರು ಕನ್ನಡ ಉಪನ್ಯಾಸಕನ ಹುದ್ದೆಯಿಂದ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಬಡ್ತಿ ಪಡೆದಿದ್ದಾರೆ! ಮನರಂಜನೆ ವಿಷಯದಲ್ಲಿಯೂ ಈ ಭಡ್ತಿಯ ಪರಿಣಾಮವನ್ನು ನೋಡಬಹುದಂತೆ. ಅಂದಹಾಗೆ ಇದು ಸುಜಯ್ ಶಾಸ್ತ್ರಿ ನಿರ್ದೇಶನದ 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಸಿನಿಮಾದ ಸುದ್ದಿ.

ರಾಜ್ ಶೆಟ್ಟಿ ಮತ್ತು ಕವಿತಾ ಗೌಡ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ಚಿತ್ರ ಆಗಸ್ಟ್ 15ರಂದು ಬಿಡುಗಡೆಯ ಸ್ವಾತಂತ್ರ್ಯ ಪಡೆಯಲಿದೆ. ಈಗಾಗಲೇ ಚಿತ್ರದ ಹಾಡು ಮತ್ತು ಟ್ರೇಲರ್ ಬಿಡುಗಡೆಯಾಗಿದ್ದು ಕುತೂಹಲ ಮೂಡಿಸಿದೆ.

ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬ ತಾನು ಮಾಡಿಲ್ಲದ ತಪ್ಪಿಗೆ ಸಿಕ್ಕಿಹಾಕಿಕೊಂಡು ಪರದಾಡುವ ಫಜೀತಿ ಕಥೆಯಲ್ಲಿ ಪ್ರಮೋದ್ ಶೆಟ್ಟಿ ಕಾಮಿಡಿ ಖಳನಾಗಿ ಬೆಚ್ಚಿ ಬೀಳಿಸದೆ ನಕ್ಕು ನಗಿಸುತ್ತಾರಂತೆ.

'ಸ್ವಾಗತಂ ಕೃಷ್ಣ' ಎಂಬ ಹಾಡಿಗೆ ರಾಜ್ ತಮ್ಮ ಬೋಳುತಲೆ ಸವರಿಕೊಳ್ಳುತ್ತಲೇ ಸ್ಯಾಂಡಲ್‌ವುಡ್‌ನ ಬ್ಯೂಟಿಗಳಾದ ಕಾರುಣ್ಯಾ ರಾಮ್, ರಚನಾ ದಶರಥ ಮತ್ತು ಶುಭಾ ಪೂಂಜಾ ಅವರ ನೃತ್ಯಾಸ್ವಾದ ಮಾಡುವ ವಿಡಿಯೊ ಸಾಂಗ್ ಸಖತ್ ವೈರಲ್ ಆಗಿತ್ತು. ಆ ಹಾಡಿಗೆ ಸಿಕ್ಕಿದ ಪ್ರತಿಸ್ಪಂದನೆಯೇ ಚಿತ್ರಕ್ಕೂ ಸಿಗಲಿದೆ ಎಂಬುದು ತಂಡದ ವಿಶ್ವಾಸ. ಸ್ವಾತಂತ್ರ್ಯೋತ್ಸವದ ದಿನ ದೇಶಭಕ್ತಿಯ ಅಲೆಯಲ್ಲಿರುವ ಜನರಿಗೆ ನಗುವಿನ ಬಲೆ ಬೀಸುವ ಉದ್ದೇಶದಿಂದ ಬರುತ್ತಿರುವ 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ'ಕ್ಕೆ ಜನರು ಏನೆನ್ನುತ್ತಾರೋ ಎಂಬುದನ್ನು ಕಾದು ನೋಡಬೇಕಷ್ಟೆ.



ಚಿತ್ರಗಳು: ಕೆ. ಎನ್. ನಾಗೇಶ್‌ಕುಮಾರ್

# ಮೀಡಿಯಾಗೆ ಡಿ-ಬಾಸ್ ಡಿಶ್ಯೂಂ!



ದರ್ಶನ್ ತೆರೆಯ ಮೇಲಷ್ಟೇ ಅಲ್ಲ, ತೆರೆಯ ಹಿಂದೆಯೂ ಆ್ಯಕ್ಷನ್ ಹೀರೊನೇ. ಕೆಲವು ವರ್ಷಗಳ ಹಿಂದೆ ಪತ್ನಿಯ ಮೇಲೆ ತಮ್ಮ ಆ್ಯಕ್ಷನ್ ಹೀರೊಯಿಸಂ ತೋರಿಸಲು ಹೋಗಿ ಕಂಬಿ ಎಣಿಸುವ ಪರಿಸ್ಥಿತಿಯೂ ಬಂದಿತ್ತು. ಜೈಲಿನಲ್ಲಿ ಇದ್ದು ಬಂದರೂ ಇವರ ಖದರ್ ಏನೂ ಕಮ್ಮಿಯಾಗಿಲ್ಲ. 'ಜೈಲಿನಲ್ಲಿರಲಿ ಬಯಲಿನಲ್ಲಿರಲಿ ಬಾಸ್ ಬಾಸೇ ಅಲ್ವಾ?' ಎಂಬುದು ಡಿ ಬಾಸ್ ಆರಾಧಕರ ಹೆಮ್ಮೆಯ ಮಾತು.

ದರ್ಶನ್‌ಗೂ ಮಾಧ್ಯಮದವರಿಗೂ ಒಂಥರ ಹಾವು ಮುಂಗುಸಿ ಸಂಬಂಧ. ಈ ಕಾಲದ ಹಾವು ಮತ್ತು ಮುಂಗುಸಿ ಎರಡೂ ಬದಲಾಗಿವೆ ಬಿಡಿ. ಹಾವು ತನ್ನ ಸಹಜ ಸ್ವಭಾವ ಬದಲಿಸಿಕೊಂಡು ಮುಂಗುಸಿಯ ಬಾಲ ಸವರಿ ದೋಸ್ತಿ ಮಾಡಿಕೊಳ್ಳುವ ಪ್ರಯತ್ನಕ್ಕೆ ಇಳಿಯುವುದೂ, ಮುಂಗುಸಿ ರಬಕ್ಕನೇ ತಿರುಗಿ ಪರಚುವುದೂ ನಡೆಯುತ್ತಲೇ ಇದೆ. ಹಾವು ನಾಜೂಕಾದಷ್ಟೂ ಮುಂಗುಸಿಯ ಪರಾಕ್ರಮ ಹೆಚ್ಚುತ್ತಿದೆ. ಇಲ್ಲಿ ಯಾರು ಹಾವು ಯಾರು ಮುಂಗುಸಿ ಎಂದೆಲ್ಲ ಕೇಳಬೇಡಿ.

ಇತ್ತೀಚೆಗೆ 'ಕುರುಕ್ಷೇತ್ರ' ಸಿನಿಮಾ ಸುದ್ದಿಗೋಷ್ಠಿಯಲ್ಲಿ ಡಿ ಬಾಸ್ ಮತ್ತೊಮ್ಮೆ ಮೀಡಿಯಾದವರನ್ನು ರಬಕ್ಕನೇ ಪರಚಿದ್ದಾರೆ. ನಡೆದಿದ್ದು ಇಷ್ಟು: 'ಕುರುಕ್ಷೇತ್ರ' ಸಿನಿಮಾ ಪತ್ರಿಕಾಗೋಷ್ಠಿಯಲ್ಲಿ ದರ್ಶನ್ ಮಾಧ್ಯಮದವರ ಜೊತೆ ಮಾತಿಗೆ ಕೂತಿದ್ದಾರೆ. ಸಿನಿಮಾ ಕುರಿತ ಮಾತಿನ ಮಧ್ಯವೇ ನಿರ್ಮಾಪಕ ಮುನಿರತ್ನ ಅವರ ರಾಜಕೀಯದ ಕುರಿತೂ ದರ್ಶನ್ ಅಭಿಪ್ರಾಯ ಪಡೆದುಕೊಳ್ಳುವ ಪತ್ರಕರ್ತರ ಚಾಲಾಕಿ ಪ್ರಶ್ನೆಯನ್ನು, 'ಓನ್ಲಿ ಸಿನಿಮಾ... ಡನ್. ಡನ್...ನೆಕ್ಸ್ಟ್..' ಎಂಬ ಮೂರೇ ಶಬ್ದದಲ್ಲಿ ದಬ್ಬಿದ್ದಾರೆ ಚಾಲೆಂಜಿಂಗ್ ಸ್ಟಾರ್. ಇಷ್ಟಕ್ಕೂ ಸುಮ್ಮನಾಗದೆ ಸುತ್ತಿ ಬಳಸಿ, 'ಸುದೀಪ್ ನಿಮ್ಮನ್ನು ಯಾವಾಗಲೂ ಫ್ರೆಂಡ್ ಅಂತ ಕನ್ಸಿಡರ್ ಮಾಡ್ತೀನಿ ಅಂತಾರೆ. ಅವರ ಸ್ನೇಹದ ಬಗ್ಗೆ ನೀವ್ಯಾಕೆ ಎಲ್ಲೂ ಮಾತಾಡಲ್ಲ?' ಎಂಬ ಪ್ರಶ್ನೆಯನ್ನೂ ಮುಂದಿಟ್ಟಿದ್ದಾರೆ. ಕಿಚ್ಚನ ಹೆಸರು ಕೇಳಿದ್ದೇ ಮುಖದಲ್ಲಿ ಕಿಚ್ಚು ಹೊತ್ತಿಸಿಕೊಂಡ 'ಕುರುಕ್ಷೇತ್ರದ ಹೀರೊ' ದುರ್ಯೋಧನ, ನೇರವಾಗಿ 'ದರ್ಶನ್ ಯಾರ ಜೊತೆ ಮಾತಾಡ್ಬೇಕು, ಎಷ್ಟೊತ್ತಿಗೆ ಎದ್ದೋಬೇಕು, ಎಷ್ಟೊತ್ತಿಗೆ ಊಟ ಮಾಡ್ಬೇಕು, ಯಾರನ್ನ ಫ್ರೆಂಡ್‌ಶಿಪ್ ಮಾಡ್ಬೇಕು, ರಾತ್ರಿ ನನ್ ಹೆಣ್ತಿ ಪಕ್ಕಾನೇ ಮಲ್ಕೋಬೇಕಾ ಬೇಡ್ವಾ ಇದನ್ನೆಲ್ಲ ಮೀಡಿಯಾದವ್ರು ಡಿಸೈಡ್ ಮಾಡ್ತಾರಾ? ಅದು ನನ್ ಪರ್ಸನಲ್ ವಿಷಯ ಅಲ್ವಾ? ಬಿಟ್ಬಿಡಿ' ಎಂದು ತಣ್ಣಗೇ ಮಾತಿನ ತಪರಾಕಿ ಕೊಟ್ಟು ಎದುರಿನ ಟೇಬಲ್ ಮೇಲೆ ಮೆಲುವಾಗಿ ಗುದ್ದಿ ಎದ್ದು ಹೋಗಿದ್ದಾರೆ.

ಅಷ್ಟೇ, ಖೇಲ್ ಖತಂ; ನಾಟಕ್ ಬಂದ್! ಮತ್ತೆ ಮೇಲೆ ಉಲ್ಲೇಖಿಸಿದ ಹಾವು ಮುಂಗುಸಿ ಕತೆಗೂ ಈ ಪ್ರಸಂಗಕ್ಕೂ ಯಾವ ಸಂಬಂಧವೂ ಇಲ್ಲ.